# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೩೦, ಸೆಪ್ಟೆಂಬರ್, ೨೦೨೫ (ಆಶ್ವಯುಜ , ೦೮, ಶಕವರ್ಷ, ೧೯೪೭)<br>BENGALURU, TUESDAY, 30, SEPTEMBER, 2025 (AASHWAYUJA , 08, SHAKAVARSHA, 1947) | ನಂ. ೬೪೫<br>No. 645 |


## PERSONNEL AND ADMINISTRATIVE REFORMS SECRETARIAT

## NOTIFICATION

**No.DPAR 01 CHUVEBHA (ADDL.CEO-1)2024, Bengaluru, Dated: 30.09.2025**

The following Order No.76/KT-LA/34/2023/CEMS-II, dated, 09th September, 2025 of the Election Commission of India is republished hereunder for general information:

# ELECTION COMMISSION OF INDIA

**Nirvachan Sadan, Ashoka Road, New Delhi-110001**

**No: 76/KT-LA/34/2023/CEMS-II**

Dated: 09th September, 2025 / 18 Bhadrapada, 1947(Saka)

## ORDER

**WHEREAS,** the General Election to Legislative Assembly, 2023 for **106-Davangere North** Assembly Constituency of Karnataka was held in pursuance of the Election Commission of India Notification No.464/KT-LA/2023, dated 13th April, 2023; and

**WHEREAS,** as per Section 78 of the Representation of the People Act, 1951, every contesting candidate at an election shall, within 30 days from the date of election of the returned candidate, lodge with the District Election Officer an account of his/her election expenses which shall be a true copy of the account kept by him/her or his/her election agent under Section 77 of the said act; and

**WHEREAS,** the result of the election for **106-Davangere North** Assembly Constituency of Karnataka, 2023 was declared by the Returning Officer on 13th May, 2023 and hence the last date for lodging the account of Election Expenses was 12th June, 2023; and

**WHEREAS**, as per the report dated: 05.08.2024 of **District Election Officer, Davangere** under sub-rule(1) of Rule 89 of the Conduct of Elections Rules, 1961

received through the Chief Electoral Officer, Karnataka vide his letter no.DPAR/08/Chuvebha(Addl CEO-1)2023; dated 13.08.2024 stating that **Sh. Keerthi Kumar. K.S,** a contesting candidate from **106- Davangere North** Assembly Constituency in General Election to Legislative Assembly of Karnataka, 2023 has failed to lodge the account of his election expenses, as required under law; and

**WHEREAS,** on basis of the said report of the **District Election Officer, Davangere** a 'Show Cause Notice' No. 76/KT-LA/34/2023/CEMS-II, dated 20th September, 2024 was issued under sub rule (5) of Rule 89 of the Conduct of Elections Rules, 1961 by the Election Commission of India to **Sh. Keerthi Kumar. K.S**, for not lodging of the account of Election Expenses; and

**WHEREAS,** through the above said 'Show Cause Notice' and under sub rule(6) of Rule 89 of the Conduct of Elections Rules, 1961, **Sh. Keerthi Kumar. K.S** was directed to submit representation in writing to the Commission explaining the reasons for not lodging the account and also to lodge the account of his election expenses with the **District Election Officer**, **Davangere** District within 20 days from the date of receipt of the notice; and

**WHEREAS,** the **District Election Officer, Davangere** in his report no.ELNCR/57/2024-25; dated 28.03.2025 has reported that the candidate Sh. Keerthi Kumar. K.S. was not residing in the given address and his whereabouts was not known, hence the said 'show Cause Notice' was pasted on the wall of the house and a mahazar was prepared **27.11.2024**; and

**WHEREAS,** the District Election Officer, **Davangere** in his Supplementary Report no. no.ELNCR/57/2024-25; dated 03.07.2025 on account of the candidate, received through Chief Electoral Officer, Karnataka letter No.DPAR/08/Chuvebha(Addl.CEO-1)2023; dated 10.07.2025 has reported that **Sh. Keerthi Kumar. K.S** has not submitted any representation or statement of account of election expenses. Further, after receipt of the said notice, **Sh. Keerthi Kumar. K.S** has neither furnished any reason nor explanation to the Election Commission of India for failure to lodge the account of his election expenses as prescribed under law; and

**WHEREAS,** Section 10A of the Representation of the People Act, 1951 provides that:-

*"If the Election Commission is satisfied that a person-*

*(a) has failed to lodge an account of election expenses within the time and in the manner required by or under this Act, and*

*(b) has no good reason or justification for the failure,*

*the Election Commission shall, by order published in the official Gazette, declare him to be disqualified and any such person shall be disqualified for a period of three years from the date of the order.";*

**WHEREAS,** on basis of the facts and available records, the Commission is satisfied that **Sh. Keerthi Kumar. K.S** has failed to lodge the account of his election expenses and has no good reason or justification for the failure to do so; and

**NOW, THEREFORE,** in pursuance of Section 10A of the Representation of the People Act, 1951, the Election Commission of India hereby declares **Sh. Keerthi Kumar. K.S,** resident of **# 1325, 2nd Stage, S.P.S Nagara, Davangere-577006** and a contesting candidate from **106- Davangere North** Assembly Constituency of Karnataka in General election to Legislative Assembly, 2023, to be disqualified for being chosen as and for being a member of either House of the Parliament or the Legislative Assembly or the Legislative Council of a State or Union Territory for a period of three years from the date of this order.

Sd/-

**(RAKESH KUMAR)**
**SECRETARY**

To.

**Sh. Keerthi Kumar. K.S,**
**# 1325, 2nd Stage,**
**S.P.S Nagara, Davangere-577006**

**(Madhu A.C)**
**Under Secretary to Government,**
**DPAR(Elections), Karnataka**

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ
## ಅಧಿಸೂಚನೆ
### ಸಂ: ಸಿಆಸುಇ 01 ಚುವೆಭ(ಅಮುಚುಅ-1) 2024, ಬೆಂಗಳೂರು, ದಿನಾಂಕ: 30.09.2025

ಭಾರತ ಚುನಾವಣಾ ಆಯೋಗದ ಈ ಕೆಳಕಂಡ ಆದೇಶ ಸಂ: 76/ಕೆಟಿ-ಎಲ್ಎ/34/2023/ಸಿಇಎಂಎಸ್-II, ದಿನಾಂಕ: 09.09.2025 ಅನ್ನು ಸಾಮಾನ್ಯ ಮಾಹಿತಿಗಾಗಿ ಪುನರ್ ಪ್ರಕಟಿಸಿದೆ.

# ಭಾರತ ಚುನಾವಣಾ ಆಯೋಗ

**ನಿರ್ವಾಚನ ಸದನ, ಅಶೋಕ ರಸ್ತೆ, ನವದೆಹಲಿ-110001**

**ಸಂಖ್ಯೆ: 76/ಕೆಟಿ-ಎಲ್ಎ/34/2023/ಸಿಇಎಂಎಸ್-II** **ದಿನಾಂಕ: 09ನೇ ಸೆಪ್ಟೆಂಬರ್, 2025**

**ಭಾದ್ರಪದ ಮಾಸದ 18ನೇ ದಿನ, 1947(ಶಕ)**

## ಆದೇಶ

ಭಾರತ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ:464/ಕೆಟಿ-ಎಲ್ಎ/2023, ದಿನಾಂಕ:13ನೇ ಏಪ್ರಿಲ್, 2023ರ ಅನುಸಾರವಾಗಿ 2023ರ ಕರ್ನಾಟಕ ವಿಧಾನಸಭೆಯ **106-ದಾವಣಗೆರೆ ಉತ್ತರ** ವಿಧಾನಸಭಾ ಮತಕ್ಷೇತ್ರಕ್ಕೆ ಸಾರ್ವತ್ರಿಕ ಚುನಾವಣೆ ನಡೆಸಿರುವುದರಿಂದ; ಮತ್ತು

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 78ನೇ ಪ್ರಕರಣದ ಅನುಸಾರ, ಚುನಾವಣೆಗೆ ಸ್ಪರ್ಧಿಸಿದ ಪ್ರತಿಯೊಬ್ಬ ಅಭ್ಯರ್ಥಿಯು, ಚುನಾವಣೆಯಲ್ಲಿ ಜಯಿಸಿದ ಅಭ್ಯರ್ಥಿಯನ್ನು ಘೋಷಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಸದರಿ ಅಧಿನಿಯಮದ 77ನೇ ಪ್ರಕರಣದ ಅಡಿಯಲ್ಲಿ, ಆತನು / ಆಕೆಯು ಅಥವಾ ಆತನ / ಆಕೆಯ ಚುನಾವಣಾ ಏಜೆಂಟರು ಇಟ್ಟುಕೊಂಡಿರುವ ಲೆಕ್ಕದ ನೈಜ ಪ್ರತಿ ಆಗಿರತಕ್ಕ ಆತನ / ಆಕೆಯ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಜಿಲ್ಲಾ ಚುನಾವಣಾಧಿಕಾರಿಯವರಿಗೆ ಸಲ್ಲಿಸಬೇಕಾಗಿರುವುದರಿಂದ; ಮತ್ತು

ರಿಟರ್ನಿಂಗ್ ಅಧಿಕಾರಿಯು ದಿನಾಂಕ:13ನೇ ಮೇ, 2023 ರಂದು ಕರ್ನಾಟಕದ 2023ರ **106-ದಾವಣಗೆರೆ ಉತ್ತರ** ವಿಧಾನಸಭಾ ಮತಕ್ಷೇತ್ರಕ್ಕೆ ಚುನಾವಣಾ ಫಲಿತಾಂಶವನ್ನು ಘೋಷಿಸಿರುವುದರಿಂದ ಮತ್ತು ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ಕಡೆಯ ದಿನಾಂಕ:12ನೇ ಜೂನ್, 2023 ಆಗಿರುವುದರಿಂದ; ಮತ್ತು

ಮುಖ್ಯ ಚುನಾವಣಾಧಿಕಾರಿ (ಸಿಇಓ), ಕರ್ನಾಟಕ ಇವರ ಪತ್ರ ಸಂಖ್ಯೆ: ಡಿಪಿಎಆರ್/08/ಚುವೆಭ(ಅಪರ ಸಿಇಓ-1)2023; ದಿನಾಂಕ: 13.08.2024 ರ ಮುಖಾಂತರ ಸ್ವೀಕರಿಸಿದ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 89ನೇ ನಿಯಮದ (1)ನೇ ಉಪ-ನಿಯಮದ ಮೇರೆಗಿನ **ಜಿಲ್ಲಾ ಚುನಾವಣಾಧಿಕಾರಿ, ದಾವಣಗೆರೆ** ಇವರ ದಿನಾಂಕ: 05.08.2024 ರ ವರದಿಯ ಪ್ರಕಾರ ಕರ್ನಾಟಕದ ವಿಧಾನಸಭಾ ಸಾರ್ವತ್ರಿಕ – ಚುನಾವಣೆ, 2023ರಲ್ಲಿ **106-ದಾವಣಗೆರೆ ಉತ್ತರ** ವಿಧಾನಸಭಾ ಮತಕ್ಷೇತ್ರದಿಂದ ಸ್ಪರ್ಧಿಸಿದ ಅಭ್ಯರ್ಥಿಯಾದ **ಶ್ರೀ ಕೀರ್ತಿ ಕುಮಾರ ಕೆ.ಎಸ್** ಇವರು ಕಾನೂನಿನ ಅಡಿಯಲ್ಲಿ ಅಗತ್ಯಪಡಿಸಿದಂತೆ, ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲರಾಗಿರುವುದರಿಂದ; ಮತ್ತು

ಜಿಲ್ಲಾ ಚುನಾವಣಾಧಿಕಾರಿ, **ದಾವಣಗೆರೆ** ಇವರ ಸದರಿ ವರದಿಯ ಆಧಾರದ ಮೇಲೆ, ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸದಿರುವುದಕ್ಕಾಗಿ **ಶ್ರೀ ಕೀರ್ತಿ ಕುಮಾರ ಕೆ.ಎಸ್** ರವರಿಗೆ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 89ರ ಉಪ-ನಿಯಮ(5)ರ ಅಡಿಯಲ್ಲಿ ಭಾರತ ಚುನಾವಣಾ ಆಯೋಗವು 'ಕಾರಣ ಕೇಳಿ ನೋಟೀಸು' ಸಂಖ್ಯೆ:76/ಕೆಟಿ-ಎಲ್ಎ/34/2023/ಸಿಇಎಂಎಸ್-II, ದಿನಾಂಕ 20ನೇ ಸೆಪ್ಟಂಬರ್, 2024ರ ನೋಟೀಸನ್ನು ನೀಡಲಾಗಿರುವುದರಿಂದ; ಮತ್ತು

ಮೇಲೆ ಹೇಳಿದ 'ಕಾರಣ ಕೇಳುವ ನೋಟೀಸಿನ' ಮೂಲಕ ಮತ್ತು ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 89ರ ಉಪ-ನಿಯಮ(6)ರ ಅಡಿಯಲ್ಲಿ, ನೋಟೀಸು ಸ್ವೀಕರಿಸಿದ ದಿನಾಂಕದಿಂದ 20 ದಿನಗಳ ಒಳಗಾಗಿ ತಮ್ಮ ಲೆಕ್ಕಪತ್ರಗಳನ್ನು ಸಲ್ಲಿಸದಿರುವುದಕ್ಕೆ ಕಾರಣವನ್ನು ವಿವರಿಸಿ ಆಯೋಗಕ್ಕೆ ಲಿಖಿತದಲ್ಲಿ ಮನವಿ ಸಲ್ಲಿಸುವಂತೆ ಹಾಗೂ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಜಿಲ್ಲಾ ಚುನಾವಣಾಧಿಕಾರಿ, **ದಾವಣಗೆರೆ** ಇವರಿಗೆ ಸಲ್ಲಿಸುವಂತೆಯೂ ಸಹ **ಶ್ರೀ ಕೀರ್ತಿ ಕುಮಾರ ಕೆ.ಎಸ್** ರವರಿಗೆ ನಿರ್ದೇಶಿಸಿರುವುದರಿಂದ; ಮತ್ತು

ಜಿಲ್ಲಾ ಚುನಾವಣಾಧಿಕಾರಿ, **ದಾವಣಗೆರೆ** ಇವರು ತಮ್ಮ ವರದಿ ಸಂಖ್ಯೆ: ಇಎಲ್ಎನ್/ಸಿಆರ್/57/2024-25; ದಿನಾಂಕ:28-03-2025ರಲ್ಲಿ ಅಭ್ಯರ್ಥಿಯಾದ **ಶ್ರೀ ಕೀರ್ತಿ ಕುಮಾರ ಕೆ.ಎಸ್** ರವರು ತಾನು ನೀಡಿರುವ ವಿಳಾಸದಲ್ಲಿ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ವಾಸಿಸುತ್ತಿಲ್ಲ ಹಾಗೂ ಅವರು ಎಲ್ಲಿ ವಾಸಿಸುತ್ತಿರುವರೆಂಬುದು ಗೊತ್ತಿಲ್ಲದಿರುವುದರಿಂದ, ತಾನು ನೀಡಿರುವ ವಿಳಾಸದಲ್ಲಿನ ನಿವಾಸದ ಗೋಡೆಯ ಮೇಲೆ ಸದರಿ 'ಕಾರಣ ಕೇಳಿ ನೋಟೀಸನ್ನು' ಅಂಟಿಸಲಾಗಿದೆ ಮತ್ತು ದಿನಾಂಕ: 27.11.2024 ರಂದು ಮಹಜರ್ ಅನ್ನು ಮಾಡಲಾಗಿದೆ ಎಂದು ವರದಿ ಮಾಡಿರುವುದರಿಂದ; ಮತ್ತು

ಮುಖ್ಯ ಚುನಾವಣಾಧಿಕಾರಿ (ಸಿಇಓ), ಕರ್ನಾಟಕ, ಇವರ ಪತ್ರ ಸಂಖ್ಯೆ: ಡಿಪಿಎಆರ್/08/ಚುವೆಭ(ಅಪರ ಸಿಇಓ-1)2023; ದಿನಾಂಕ: 10.07.2025ರ ಮುಖಾಂತರ ಸ್ವೀಕರಿಸಿದ ಅಭ್ಯರ್ಥಿಯ ಲೆಕ್ಕಪತ್ರದ ಕುರಿತಾಗಿ ಜಿಲ್ಲಾ ಚುನಾವಣಾಧಿಕಾರಿ, **ದಾವಣಗೆರೆ** ಇವರು, ತಮ್ಮ ಪೂರಕ ವರದಿ ಸಂಖ್ಯೆ: ಇಎಲ್ಎನ್/ಸಿಆರ್/57/2024-25; ದಿನಾಂಕ:03-07-2025ರಲ್ಲಿ, **ಶ್ರೀ ಕೀರ್ತಿ ಕುಮಾರ ಕೆ.ಎಸ್** ರವರು ಚುನಾವಣಾ ವೆಚ್ಚಗಳ ಲೆಕ್ಕಪತ್ರದ ಯಾವುದೇ ನಿರೂಪಣೆ ಅಥವಾ ವಿವರಪಟ್ಟಿಯನ್ನು ಸಲ್ಲಿಸಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಅಲ್ಲದೇ, ಸದರಿ ನೋಟೀಸನ್ನು ಸ್ವೀಕರಿಸಿದ ತರುವಾಯ, **ಶ್ರೀ ಕೀರ್ತಿ ಕುಮಾರ ಕೆ.ಎಸ್** ರವರು ಕಾನೂನಿನಡಿಯಲ್ಲಿ ನಿಯಮಿಸಲಾದಂತೆ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲರಾಗಿದ್ದಕ್ಕಾಗಿ ಭಾರತ ಚುನಾವಣಾ ಆಯೋಗಕ್ಕೆ ಯಾವುದೇ ಸೂಕ್ತ ಕಾರಣವನ್ನಾಗಲಿ ಅಥವಾ ವಿವರಣೆಯನ್ನಾಗಲಿ ನೀಡಿರುವುದಿಲ್ಲವಾದ್ದರಿಂದ; ಮತ್ತು

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ಎ ಪ್ರಕರಣದಲ್ಲಿ ಈ ಕೆಳಕಂಡಂತೆ ಉಪಬಂಧಿಸಲಾಗಿರುವುದರಿಂದ, ಎಂದರೆ :-

*"ಒಬ್ಬ ವ್ಯಕ್ತಿಯು,*

*(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಗತ್ಯಪಡಿಸಿದ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲನಾಗಿದ್ದಾನೆಂದು; ಮತ್ತು*

*(ಬಿ) ಹಾಗೆ ವಿಫಲನಾಗಿರುವುದಕ್ಕೆ ಯಾವುದೇ ಸರಿಯಾದ ಕಾರಣ ಅಥವಾ ಸಮರ್ಥನೆಯನ್ನು ಅವನು ಹೊಂದಿದಿಲ್ಲವೆಂದು,*

– *ಚುನಾವಣಾ ಆಯೋಗಕ್ಕೆ ಮನದಟ್ಟಾದರೆ, ಚುನಾವಣಾ ಆಯೋಗವು ರಾಜ್ಯಪತ್ರದಲ್ಲಿ ಪ್ರಕಟವಾದ ಆದೇಶದ ಮೂಲಕ ಅವನು ಅನರ್ಹನಾಗಿದ್ದಾನೆಂದು ಘೋಷಿಸತಕ್ಕದ್ದು ಮತ್ತು ಅಂಥ ಯಾರೇ ವ್ಯಕ್ತಿಯನ್ನು ಆ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅನರ್ಹಗೊಳಿಸತಕ್ಕದ್ದು" ಎಂದು ಉಪಬಂಧಿಸಿರುವುದರಿಂದ;*

ವಾಸ್ತವ ಸಂಗತಿಗಳು ಮತ್ತು ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ, **ಶ್ರೀ ಕೀರ್ತಿ ಕುಮಾರ ಕೆ.ಎಸ್** ರವರು ತಮ್ಮ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲರಾಗಿದ್ದಾರೆಂದು ಮತ್ತು ಹಾಗೆ ಸಲ್ಲಿಸಲು ವಿಫಲರಾಗಿದ್ದಕ್ಕೆ ಯಾವುದೇ ಸೂಕ್ತ ಕಾರಣವನ್ನು ಅಥವಾ ಸಮರ್ಥನೆಯನ್ನು ನೀಡಿಲ್ಲವೆಂದು ಆಯೋಗಕ್ಕೆ ಮನವರಿಕೆಯಾಗಿರುವುದರಿಂದ; ಮತ್ತು

**ಈಗ**, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ಎ ಪ್ರಕರಣದ ಅನುಸಾರವಾಗಿ, ಭಾರತದ ಚುನಾವಣಾ ಆಯೋಗವು **ಸಂಖ್ಯೆ. 1325, 2 ನೇ ಹಂತ, ಎಸ್.ಪಿ.ಎಸ್ ನಗರ, ದಾವಣಗೆರೆ-577006** ರ ನಿವಾಸಿಯಾಗಿರುವ ಮತ್ತು 2023ರಲ್ಲಿ ಕರ್ನಾಟಕದ **106- ದಾವಣಗೆರೆ ಉತ್ತರ** ವಿಧಾನ ಸಭೆಯ ಮತಕ್ಷೇತ್ರಕ್ಕೆ ನಡೆದ ಸಾರ್ವತ್ರಿಕ - ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಯಾಗಿರುವ **ಶ್ರೀ ಕೀರ್ತಿ ಕುಮಾರ ಕೆ.ಎಸ್** ಇವರನ್ನುಈ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಸಂಸತ್ತಿನ ಉಭಯ ಸದನಗಳ ಅಥವಾ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರಾಗಿ ಚುನಾಯಿತಗೊಳ್ಳುವುದಕ್ಕೆ ಮತ್ತು ಸದಸ್ಯರಾಗುವುದಕ್ಕೆ ಅನರ್ಹರೆಂದು ಈ ಮೂಲಕ ಘೋಷಿಸಿದೆ.

ಸಹಿ/-
**(ರಾಕೇಶ್ ಕುಮಾರ್)**
**ಕಾರ್ಯದರ್ಶಿ**

ಇವರಿಗೆ,
**ಶ್ರೀ ಕೀರ್ತಿ ಕುಮಾರ ಕೆ.ಎಸ್,**
**ಸಂಖ್ಯೆ. 1325, 2 ನೇ ಹಂತ,**
**ಎಸ್.ಪಿ.ಎಸ್ ನಗರ,**
**ದಾವಣಗೆರೆ-577006**

(**ಮಧು ಎ.ಸಿ**)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸು ಇಲಾಖೆ(ಚುನಾವಣೆಗಳು),ಕರ್ನಾಟಕ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH